ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1169
2	ಸದಸ್ಯರ ಹೆಸರು	ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
3	ಉತ್ತರಿಸಬೇಕಾದ ದಿನಾಂಕ	22.09.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು, ಮುತ್ತಲವಾಡಿ, ಕೆಬ್ಬೆಹುಂಡಿ ಗ್ರಾಮದಿಂದ ಹೊರಳಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಇದೆಯೇ: ಇದ್ದಲ್ಲಿ, ಸದರಿ ರಸ್ತೆಯನ್ನು ಸರ್ವೇ ಮಾಡಿ ಗುರುತು ಮಾಡಲು ಉದ್ದೇಶಿಸಲಾಗಿದೆಯೇ:	ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಮುತ್ತಲವಾಡಿ ಕಟ್ಟೆಹುಂಡಿ ಕೊಪ್ಪಲು ಗ್ರಾಮದಿಂದ ಹೊರಳಹಳ್ಳಿ ಗ್ರಾಮಕ್ಕೆ ಗ್ರಾಮ ನಕಾಶೆಯಂತೆ ಕಾಲುದಾರಿ ಇರುವುದು ಕಂಡುಬಂದಿರುತ್ತದೆ. ಸದರಿ ಕಾಲುದಾರಿಯನ್ನು ಸರ್ವೆ ಮಾಡಿ ಗುರುತು ಮಾಡಲು ಕ್ರಮವಹಿಸಲಾಗುವುದು.
ಆ)	ಈ ರಸ್ತೆಯಿಂದ ಮೇಲ್ಭಾಗದಲ್ಲಿರುವ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ಜನ ಮತ್ತು ಜಾನುವಾರುಗಳು ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು:	ಈವರೆಗೂ ಈ ಬಗ್ಗೆ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.
ಇ)	ಯಾವ ಕಾಲಮಿತಿಯಲ್ಲಿ ಸದರಿ ರಸ್ತೆಯ ಒತ್ತುವರಿಯನ್ನು ತೆರವು ಗೊಳಿಸಲು ಉದ್ದೇಶಿಸಲಾಗಿದೆ?	ಸದರಿ ರಸ್ತೆಯು ಒತ್ತುವರಿಯಾಗಿದ್ದಲ್ಲಿ ತೆರವುಗೊಳಿಸಲು ಆದ್ಯತೆ ಮೇರೆಗೆ ಕ್ರಮವಹಿಸಲಾಗುವುದು.

ಸಂಖ್ಯೆ: ಕಂಇ 161 ಎಸ್‌ಎಸ್‌ಸಿ 2021

(ಆರ್.ಅಶೋಕ)
ಕಂದಾಯ ಸಚಿವರು